ಪದಬಂಧ



ಎಡದಿಂದ ಬಲಕ್ಕೆ:

1. ಆಕಾಶ ವೀಕ್ಷಣೆಗೆ ಈಗೊಂದು ಒಳ್ಳೆಯ ಸಂದರ್ಭ (4)
3. ಅವರಲ್ಲಿ ಏನೇ ಇದ್ದರೂ ಎಲ್ಲರೂ ಆತನ ಕೈಕೆಳಗೆ (3)
4. ಕರೆದು ಕರೆದು ಹಂಚಿದ್ದೆಲ್ಲ ಕಪ್ಪು ಬಣ್ಣದ್ದು (3)
6. ತೊಗರಿ ತೋಟದ ಸುತ್ತ ಓಡಾಡುವುದೇ? (4)
7. ಸೋತು ಸೋತು ಸುಸ್ತಾಗುವುದೇ ನಿರಂತರ (3)
9. ಪಂಥಕ್ಕೆ ಕರೆದದ್ದು ಭಾರೀ ಪಾಪದ ಕೆಲಸ (3)
11. ಸೃಜನ ಶೀಲನೂ ಆಗಿದ್ದಾನೆ, ಒಳ್ಳೆಯ ಮನುಷ್ಯ (3)
13. ತೈಲಭರಿತ ಕಾಳಿನಂಥದೇ ಹಣೆಬೊಟ್ಟು ನೋಡಿ (3)
15. ಲಾಭವೋ ಲಾಭ ತಂದಿದ್ದಕ್ಕೆ ಮೆಚ್ಚುಗೆಯೋ ಮೆಚ್ಚುಗೆ (4)
17. ಗುಡಿಯ ಹೊರಗೆ ಇದೇನು ಬಟ್ಟೆ ಮನೆ? (3)
18. ವಿದ್ಯಾದಾನ ಮಾಡುವವರಿಗೆಲ್ಲ ಗೌರವದ ನಮನ (3)
19. ಲಾವಂಚ ತಂದೇ ತರುವ ಹಟ ಹೊಂದಿ ಹಿಮ್ಮೊಗ ನಿಂತನಲ್ಲ! (4)

ಮೇಲಿಂದ ಕೆಳಕ್ಕೆ:

1. ಆತಂಕವನ್ನು ನಿವಾರಿಸುವ ಕಾಲ ಬಹಳ ದೂರವೇನಿಲ್ಲ (3)
2. ಶೋಕಿಯ ಆಟಕ್ಕೆ ಈ ಗಾಡಿಯೇ ಸಾಕು (3)
3. ಆಚಾರವಂತನಿಗೆ ತಕ್ಕಂತೆ ಆತನದು ಕೃಷ್ಣನ ಹೆಸರು (3)
5. ದೂರು ತಂದವರಿಗೆ ಅಲ್ಲಿ ಕೆಟ್ಟ ಮುಕ್ತಾಯ (3)
7. ಸಾಹಸದ ಪರಿಣಾಮ ಅದು. ತಾಳಿಕೋ (3)
8. ತಾಳವನ್ನು ಹಾಕುವುದರಲ್ಲೇ ಆತ ಮುಳುಗಿಹೋಗಿದ್ದಾನೆ (3)
9. ಪರಿವರ್ತನೆಗೆ ಕಾರಣವಾದ ಮಹಾ ದೇವಿ (3)
10. ಕೊಳಕಾಗಿ ಕಂಡದ್ದೇ ಅಲ್ಲಿನ ದೋಷ (3)
12. ಗುಜರಿ ಬಂದಾಯಿತು. ಸ್ವಲ್ಪ ಅತ್ತ ಸರಿ (3)
14. ಲಾಭವನ್ನೆಲ್ಲ ದೋಚಿದ್ದು ಅದೇ ಮಹಿಳೆ ನೋಡಿ (3)
15. ಕಡಲಿನ ಅಬ್ಬರದ ಮೊರೆತಕ್ಕೆ ಉಬ್ಬರವೇ ಕಾರಣ (3)
16. ವಂಚಿಸಲಾಗದು ಬಿಡಿ. ಅದು ಸುವಾಸನಾ ಸೊಪ್ಪು (3)

## 02-1-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಪಸ್ವರ; 3. ಶರಧಿ; 4. ಮರುಕ; 6. ಕಡಿವಾಣ; 7. ಮಕರ; 9. ಹುಲುಸು; 11. ಸುಮತಿ; 13. 'ಉರುಹು' (ಹುರುಳು) ಹಿಂದುಮುಂದು); 15. ಕಟುಮಾತು; 17. ಪುಳಕ; 18. ವಸೂಲು; 19. ವನಸಿರಿ.

ಮೇಲಿಂದ ಕೆಳಕ್ಕೆ:

1. ಅಧಿಕ; 2. ರಮಣ; 3. ಶಶಾಂಕ; 5. ಕತ್ತಲು; 7. ಮದರಾಸು; 8. ರಕ್ತಕಾಂತಿ; 9. ಹುರಿಯಾಳು; 10. ಹುಡಿಗಾಸು (ತಲೆಕೆಳಗು); 12. ಮಲೆಪು; 14. ರುಮಾಲು; 15. ಕಕವ; 16. ತುವರಿ (=ತೊಗರಿ).

# ಪ್ರಶ್ನಾಂಕಣ

## ವಜ್ರದಲ್ಲೂ ಇದೆಯೇ ವರ್ಣ ವೈವಿಧ್ಯ?

ಖಂಡಿತ. ಆದರೆ ವಜ್ರದ ಈ ವೈವಿಧ್ಯ ಬಹುಜನರಿಗೆ ಅಪರಿಚಿತ. ಏಕೆಂದರೆ ವರ್ಣಭರಿತ ವಜ್ರಗಳು ಅತ್ಯಂತ ಅಪರೂಪ. ಸಹಜವಾಗಿಯೇ ಅವುಗಳ ಬೆಲೆಯೂ ಪರಿಚಿತ ವಜ್ರಕ್ಕಿಂತ ಬಹುಪಟ್ಟು ವಿಪರೀತ; ಕಲ್ಪನಾತೀತ. ಗರಿಷ್ಠ ಭದ್ರತೆಯ ಪ್ರತಿಷ್ಠಿತ ಮ್ಯೂಸಿಯಂಗಳಲ್ಲಷ್ಟೇ ಅವು ಪ್ರದರ್ಶಿತ.

ವಾಸ್ತವ ಏನೆಂದರೆ ಧರೆಯ ಅಂತರಾಳದಲ್ಲಿ ಭೂ ಕವಚದಲ್ಲಿ ಅಲ್ಲಿನ ಅತೀವ ತಾಪ-ಒತ್ತಡಗಳಲ್ಲಿ ಅತಿ ವಿರಳ ಸಂದರ್ಭಗಳಲ್ಲಿ ಇಂಗಾಲದ ಪರಮಾಣುಗಳು ಒಟ್ಟುಗೂಡಿ ಒಂದಾಗಿ ವಜ್ರದ ಹರಳುಗಳಾಗುತ್ತವೆ. ಮುಂದೆ ಆಕಸ್ಮಿಕವಾಗಿ ಜ್ವಾಲಾಮುಖಿಗಳಲ್ಲಿ ಉಕ್ಕುವ ಲಾವಾದ ಮೂಲಕ ಭೂ ನೆಲದಲ್ಲಿ 'ಕೈಗೆಟುಕುವ ಆಳಕ್ಕೆ' ಬಂದು ತಲುಪುತ್ತವೆ. ಅಂಥ ಸ್ಥಳಗಳಲ್ಲಿ ಗಣಿ ತೋಡುವವರ ಕೈ ಸೇರುತ್ತವೆ. ವಜ್ರದ ಹರಳುಗಳದು ಬಹುವಾಗಿ ಕಾಳುಗಳಷ್ಟೇ ಗಾತ್ರ; ಭಾರೀ ಹರಳುಗಳು ಅತ್ಯಪರೂಪವಾಗಷ್ಟೇ ಪ್ರಾಪ್ತ.

ಹೀಗೆ ಲಭಿಸುವ ಬಹಳ ವಜ್ರಗಳದು ಸಾಮಾನ್ಯವಾಗಿ ಮಂಜಿನ ಬಣ್ಣ ಅಥವಾ ತಿಳಿ ಬೂದಿ ಬಣ್ಣ. ಅಂಥ 'ಅಪಕ್ವ' ಹರಳುಗಳದು ಕಳಪೆ ವರ್ಗ. ಪರಿಶುದ್ಧ ಪರಿಪಕ್ವ ಹರಳುಗಳದು ನಿರ್ವರ್ಣ ಅಥವಾ ನೀರಿನ ವರ್ಣ. ಸಾಣೆ ಹಿಡಿದ ಮೇಲಂತೂ ಬೆಳಕಲ್ಲಿ ಅವುಗಳದು ನಕ್ಷತ್ರಕಾಂತಿ; ಹಾಗಾಗಿ ಆಭರಣಯೋಗ್ಯ ಪ್ರಕೃತಿ. ಭಾರೀ ಬೆಲೆ ಬಾಳುವ, ಬಹು ಪರಿಚಿತ ವಜ್ರಗಳು ಇಂತಹವೇ (ಚಿತ್ರ-1).




ವಜ್ರವನ್ನು ಇನ್ನೂ ಅಧಿಕ ಅಮೂಲ್ಯವಾಗಿಸುವ ಗುಣ ಅದರ ಬಣ್ಣ. ವಿರಳಾತಿ ವಿರಳವಾಗಿ ಕೆಲವು ವಿವಿಧ ವರ್ಣಗಳನ್ನು ಪಡೆದ ವಜ್ರದ ಹರಳುಗಳು ದೊರಕುತ್ತವೆ: 'ಹಳದಿ, ಕಿತ್ತಳೆ, ಗುಲಾಬಿ, ಕೆಂಪು, ನೇರಿಳೆ, ತಿಳಿ ನೀಲಿ, ಗಾಢ ನೀಲಿ ಇತ್ಯಾದಿ.' (ಅಂಥ ವರ್ಣ ವಿಧಗಳ ಕೆಲ ಜಗತ್ಪ್ರಸಿದ್ಧ ವಜ್ರಗಳನ್ನು (ಚಿತ್ರ-2)ರಲ್ಲಿ ಗಮನಿಸಿ. ಸಾಣೆ ಹಿಡಿದ ಇಂತಹ ವಜ್ರಗಳದು ಅನುಪಮ ಕಾಂತಿ, ಮನಮೋಹಕ ಸೊಗಸು ದಿವ್ಯ, ಸ್ವರ್ಗೀಯ ಸೌಂದರ್ಯ. ಹಾಗೆಯೇ ಊಹಾತೀತ ಬೆಲೆ. ಇದೇ ಕಳೆದ ನವೆಂಬರ್ 12 ರಂದು ಸಮೀಪ 50 ಕ್ಯಾರಟ್ ತೂಕದ ಹಳದಿ ವಜ್ರವೊಂದು 35.5 ದಶಲಕ್ಷ ಡಾಲರ್‌ಗೆ (ರೂ. 213 ಕೋಟಿ) ಹರಾಜಾಯಿತು! ಅದರ ಮರುದಿನ 'ಪಿಂಕ್‌ಸ್ಟಾರ್' ಹೆಸರಿನ, ಸಮೀಪ 60 ಕ್ಯಾರಟ್ ತೂಕದ (5 ಕ್ಯಾರಟ್ 1 ಗ್ರಾಂಗೆ ಸಮ) ಗುಲಾಬಿ ವರ್ಣದ ವಜ್ರದ ಹರಳು 83.4 ದಶಲಕ್ಷ ಡಾಲರ್‌ಗೆ (ರೂ. 500 ಕೋಟಿ 50 ಲಕ್ಷ) ಹರಾಜುಗೊಂಡಿತು!

ಧರೆಯ ಆಂತರ್ಯದಲ್ಲಿ ರೂಪುಗೊಂಡ ನಂತರವೂ ವಜ್ರವೊಂದು ಮಿಲಿಯಾಂತರ ವರ್ಷ ಅಲ್ಲೇ ವಿಕಿರಣಪಟ್ಟು ಧಾತುಗಳ ಸನಿಹದಲ್ಲೇ ಉಳಿದುಬಿಟ್ಟರೆ ಅವುಗಳ ವಿಕಿರಣದ ಪರಿಣಾಮವಾಗಿ ಅಂಥ ವಜ್ರದ ಹರಳು ವರ್ಣಗಳಿಸ ತೊಡಗುತ್ತದೆ. ಮನುಷ್ಯ ಲೋಕದಲ್ಲಿ ಅದರ ಬೆಲೆ ಹೆಚ್ಚುತ್ತದೆ. ಎಂಥ ಸೋಜಿಗ!

■ ಎನ್. ವಾಸುದೇವ್